ಸತ್ಯವಿತ್ತೋ? ಎಷ್ಟು ಸುಳ್ಳಿತ್ತೋ ಗೊತ್ತಿಲ್ಲ. ಆದರೆ ಈ ವಿಷಯವನ್ನು ಯಾರಲ್ಲೂ ಹೇಳಕೂಡದು ಅಂತ ತಾಕೀತು ಮಾಡಿ ಅವರನ್ನು ಹೋಟೆಲಿಗೆ ಕರೆದುಕೊಂಡು ಹೋಗಿ ಬನ್ನು ಹಾಲು ಕೊಟ್ಟು, ಚಾಕಲೇಟು ಕೈಗಿತ್ತು ಕಳಿಸಿದರೆಂಬ ಸಂಗತಿಯನ್ನು ನಮ್ಮಲ್ಲಿ ಗುಟ್ಟಿನಲ್ಲೆಂಬಂತೆ ಹೇಳಿ ನಮ್ಮ ಹೊಟ್ಟೆ ಉರಿಸಿಬಿಟ್ಟಿದ್ದರು.

ಮೊದಲೆಲ್ಲಾ ವಿಷಮ ಶೀತ ಜ್ವರವೊಂದೇ ಭಯಾನಕ ಜ್ವರವಾಗಿತ್ತು. ಇತ್ತೀಚೆಗೆ ವೈದ್ಯ ವಿಜ್ಞಾನದ ಪ್ರಗತಿಯ ಫಲವಾಗಿ ನಾವು ಹೆಚ್ಚು ಭಾಗ್ಯಶಾಲಿಗಳು ಅಂತನ್ನಿಸುತ್ತದೆ. ಈಗೆಲ್ಲಾ ಜೀವನ ಶೈಲಿ ಉತ್ತಮವಾಗಿದ್ದರೆ ಈ ಹಾಳು ಮೂಳು ಶೀತ ಜ್ವರಗಳೆಲ್ಲಾ ಒಂದು ದೊಡ್ಡ ಸಂಗತಿಯೇ ಅಲ್ಲ ಅನ್ನುವಷ್ಟರಮಟ್ಟಿಗೆ. ಇಷ್ಟೆಲ್ಲಾ ಬದುಕು ನಮಗೆ ಅವಕಾಶಗಳನ್ನು ಕೊಟ್ಟು ಆಯುಷ್ಯ ಹೆಚ್ಚಿಸುತ್ತಿರುವಾಗ ನಾವು ಇರುವುದಕ್ಕೆ, ಇಲ್ಲದಕ್ಕೆ ವೃಥಾ ಕೊರಗಿ ಬದುಕನ್ನು ಹಾಳು ಮಾಡಿಕೊಳ್ಳುತ್ತಿರುವುದು ಮಾತ್ರ ಯಾತಕ್ಕಾಗಿ ಅಂತ ಗೊತ್ತಾಗುತ್ತಿಲ್ಲ. ಬದುಕಿನ ಪರಿಯೇ ಹಾಗೇ ಅಲ್ಲವೇ? ಇದು ಸತ್ಯವೇ. ಹಾಗಿರುವಾಗ ಬದುಕಿನ ಜೊತೆಗೆ ಇಂತಹ ಕೊರಗುವಿಕೆಯೂ ಒಂದು ಜ್ವರದ ತಾಪದಂತೆ ಅಂಟಿಕೊಂಡು ಬರುತ್ತದೆಯೋ ಏನೋ? ಹಾಗೆಯೇ ಕೆಲವರು ಹೀಗೆ ಸುಮ್ಮಗೆ ಕೊರಗಿ ಕೊರಗಿ ಜ್ವರ ಹಿಡಿಸಿಕೊಳ್ಳುವುದೂ ಉಂಟು. ಇನ್ನು ಈಗ ಕಾಯಿಲೆಗಳನ್ನು ಗುಣಪಡಿಸಲು ಬೇಕಾದಷ್ಟು ಪಳಗಿದ ವೈದ್ಯರ ದಂಡೇ ಇದ್ದರೂ ಸಾಕಷ್ಟು ಔಷಧಿಗಳು ಲಭ್ಯವಿದ್ದರೂ ಹೆಚ್ಚುತ್ತಿರುವ ನಾನಾ ಜ್ವರಗಳನ್ನು ಅವಗಣನೆ ಮಾಡುವಂತಿಲ್ಲ.

ಇನ್ನು ಜ್ವರ ಬರುವುದಕ್ಕೆ ಇಂತಹುದೇ ಅಂತ ನಿರ್ದಿಷ್ಟ ಕಾರಣ ಕೂಡ ಬೇಕಿಲ್ಲ. ಕೆಲವರಿಗೆ ಪ್ರೇಮ ಜ್ವರ, ಪರೀಕ್ಷೆ ಜ್ವರ, ಟೀಚರ್ ಹೆದರಿಕೆಗೆ ಜ್ವರ, ಅಪ್ಪನ ಹೆದರಿಕೆಯ ಜ್ವರ... ಹೀಗೆ ಇಂತಹ ಕೆಲ ಕಳ್ಳ ಜ್ವರಗಳೆಲ್ಲವೂ ಆಯಾ ಕಾಲಕ್ಕೆ ತಕ್ಕಂತೆ, ವಯೋಮಾನಕ್ಕೆ ತಕ್ಕಂತೆ ಬೆಂಬಿಡದೆ ಕಾಡುವುದುಂಟು. ಇವೆಲ್ಲಾ ಸಹಜ ಜ್ವರಗಳಾದರೂ ಕೆಲವೊಮ್ಮೆ ಇಂತಹ ಖಾಸಗಿ ಜ್ವರಗಳೆಲ್ಲಾ ಹದ್ದು ಮೀರಿ ವಿಕೋಪಕ್ಕೆ ಹೋಗಿ ಅಪಾಯಕ್ಕೆ ಎಡೆ ಮಾಡುವ ಸಂಭವವನ್ನೂ ಅಲ್ಲಗಳೆಯುವಂತಿಲ್ಲ.

ಒಮ್ಮೆ ಹಾಸ್ಟೆಲಿನಲ್ಲಿರುವಾಗ ಎಲ್ಲಾ ಕಡೆಗಳಲ್ಲೂ ಮಲೇರಿಯಾ ಜ್ವರದ್ದೇ ಕಾರುಬಾರು. ಮಲೇರಿಯಾದಿಂದಾಗಿ ಇವತ್ತು ಇಷ್ಟು ಜನ ಅಸು ನೀಗಿದರು, ಇಷ್ಟು ಜನ ಆಸ್ಪತ್ರೆಗೆ ದಾಖಲಾದರು ಎಂಬಿತ್ಯಾದಿ ವರದಿಗಳು ಮಾಧ್ಯಮಗಳ ಮೂಲಕ ಬಿತ್ತರಗೊಂಡು ನಮ್ಮನ್ನು ತಲ್ಲಣಗೊಳಿಸುತ್ತಿದ್ದವು. ಆದರೂ ಇಂತಹ ಜ್ವರಗಳೆಲ್ಲವೂ ನಮಗೆ ತಟ್ಟಲಾರವು ಅಂತ ಹುಂಬ ಧೈರ್ಯದಲ್ಲಿರುವಾಗಲೇ ಹಾಸ್ಟೆಲಿನ ನನ್ನ ಗೆಳತಿಯೊಬ್ಬಳಿಗೆ ತೀವ್ರ ಜ್ವರ ಬಂದು ಅದು ಮಲೇರಿಯಾ ಅಂತ ಸಾಬೀತಾದಾಗ ಮಾತ್ರ ನಾವುಗಳೆಲ್ಲಾ ತತ್ತರಿಸಿಬಿಟ್ಟಿದ್ದೆವು. ಯಾವುದೋ ಊರಿನಲ್ಲಿದ್ದ ಅಪ್ಪ, ಅಮ್ಮ, ತಮ್ಮ, ತಂಗಿಯರ ನೆನಪಾಗಿ ಅನಾಥ ಭಾವ ಆವರಿಸುತ್ತಿತ್ತು. ಈಗ ಜ್ವರ ಬಂದಾಕ್ಷಣ ಉಪೇಕ್ಷೆ ಮಾಡುವಂತಿಲ್ಲ, ಎಲ್ಲರೂ ಕಡ್ಡಾಯವಾಗಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳುವುದೇ ವಾಸಿ ಅಂತ ಎಲ್ಲರೂ ತೀರ್ಮಾನಿಸಿದ್ದರು. ಆದರೆ ರಕ್ತ ಪರೀಕ್ಷೆಗೆ ಮತ್ತೆ ಸೂಜಿಯಿಂದ ಚುಚ್ಚಿಸಿಕೊಳ್ಳಬೇಕು! ನಾವು ಏನೆಲ್ಲಾ ದಿಢೀರ್ ನೋವುಗಳನ್ನು ಅನುಭವಿಸುತ್ತೇವೆ. ಬಿದ್ದು ಕಾಲಿಗೆ ಪೆಟ್ಟು ಮಾಡಿಕೊಳ್ಳುತ್ತೇವೆ, ಪೆಟ್ಟು ಕೊಟ್ಟರೆ, ಚಿವುಟಿದರೆ, ಗಾಯ ಮಾಡಿಕೊಂಡರೆ... ಹೀಗೆ ನಾನಾ ರೀತಿಯಲ್ಲಿ ನೋವುಗಳನ್ನು ಅನುಭವಿಸುತ್ತೇವೆ. ಆದರೆ ಸೂಜಿಯಿಂದ ಚುಚ್ಚಿಸಿಕೊಳ್ಳುವ ನೋವೆಂದರೆ ಹೌಹಾರಿ ಗಾಬರಿ ಬೀಳುತ್ತೇವೆ. ಆದರೂ ಅನಿವಾರ್ಯ ಪರಿಸ್ಥಿತಿಯಲ್ಲಿ ನಾವುಗಳೆಲ್ಲರೂ ಸರಕಾರಿ ಆಸ್ಪತ್ರೆಗೆ ದೌಡಾಯಿಸಿ